39 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿ.ಸಿ. ನಂ. 20367-2020

ಸಿಡಬ್ಲ್ಯೂ –7 ಪಿಡಬ್ಲ್ಯೂ – 3

| | |
|---|---|
| ಸಾಕ್ಷಿದಾರರ ಹೆಸರು | : ಕೃಷ್ಣ |
| ತಂದೆಯ ಹೆಸರು | : ಲಿಂಗಪ್ಪ |
| ವಯಸ್ಸು | : 51 ವರ್ಷ |
| ಕೆಲಸ | : ಎ ಎಸ್ ಐ (ಸದಾಶಿವನಗರ ಪೋ.ಠಾ) |
| ವಾಸ | : ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 21-03-2023 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನಾನು ಕಳೆದ 2 ವರೆ ವರ್ಷಗಳಿಂದ ಸದಾಶಿವನಗರ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 21-10-2020 ರಂದು ಸಂಜೆ ಗಂಟೆಯ ಸಮಯದಲ್ಲಿ ನಮ್ಮ ಠಾಣೆಯ ಪಿಐ ರವರಾದ ಚಾಸಾ 14 ರವರು ನನ್ನನ್ನು ಮತ್ತು ಚಾಸಾ 8 ರಿಂದ 12 ರವರನ್ನು ಠಾಣೆಗೆ ಬರಮಾಡಿಕೊಂಡು ಸದಾಶಿವನಗರದ ಸ್ಯಾಂಕಿ ಕೆರೆಯ ಬಳಿ ಟೀ ಪಾರ್ಕ ಹತ್ತಿರದ ಕಾಂಪೌಂಡ್ ಬಳಿ 6 ಜನರ ಗುಂಪೊಂದು ಆಯುಧಗಳನ್ನು ಹಿಡಿದುಕೊಂಡು ಸಾರ್ವಜನಿಕರನ್ನು ಅಡ್ಡಗಟ್ಟಿ, ಅವರಿಂದ ಬೆಲೆ ಬಾಳುವ ವಸ್ತುಗಳನ್ನು ದರೋಡೆ ಮಾಡುತ್ತಿದ್ದಾರೆ ಎಂದು ಬಾತ್ಮಿದಾರರರಿಂದ ಮಾಹಿತಿ ಬಂದಿದ್ದು, ದಾಳಿ ಮಾಡಬೇಕೆಂದು ನನಗೆ ಮತ್ತು ಚಾಸಾ 8 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ನಾವು ಸಂಜೆ 07.15 ಗಂಟೆಗೆ ಚಾಸಾ 5 ಮತ್ತು 6 ರವರನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ 14 ರವರ ಸದರಿ ಪಂಚರಿಗೂ ಸಹ ದಾಳಿಯ ಬಗ್ಗೆ ಮಾಹಿತಿ ನೀಡಿ ಅವರಿಗೆ ನೋಟೀಸನ್ನು ನೀಡಿರುತ್ತಾರೆ. ಅವರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ.

ನಂತರ ನಾನು, ಚಾಸಾ 14, ಚಾಸಾ 8 ರಿಂದ 12 ರವರು ಹಾಗೂ ಪಂಚರಾದ ಚಾಸಾ 5 ಮತ್ತು 6 ರವರು ಸೇರಿ ರಾತ್ರಿ 07.30 ಗಂಟೆಗೆ ಸರ್ಕಾರಿ ವಾಹನದಲ್ಲಿ ಠಾಣೆಯಿಂದ ಹೊರತು ರಾತ್ರಿ 07.40 ಗಂಟೆಗೆ ಸ್ಯಾಂಕಿ ಕೆರೆಯ ಹತ್ತಿರ ಸುಮಾರು 200 ಮೀಟರ್ ದೂರದಲ್ಲಿ ನಿಂತು ನೋಡಿದಾಗ 6 ಜನರ ಗುಂಪು ನಿಂತುಕೊಂಡಿರುವುದು

ಕಂಡು ಬಂದಿರುತ್ತದೆ. ನಂತರ ಚಾಸಾ 14 ರವರು ಚಾಸಾ 8 ಮತ್ತು ಪಂಚರಾದ ಚಾಸಾ 5 ರವರಿಗೆ ಸದರಿ ಆಸಾಮಿಗಳ ಹತ್ತಿರ ಹೋಗಿ ಅವರು ದರೋಡೆ ಮಾಡುವ ಉದ್ದೇಶವನ್ನು ಹೊಂದಿದ್ದರೇ ಕೈಯನ್ನು ಎತ್ತಿ ಸನ್ನೆ ಮಾಡುವಂತೆ ಸೂಚಿಸಿ ಕಳುಹಿಸಿ ಕೊಟ್ಟಿದ್ದರು.

ಅವರು ಸ್ವಲ್ಪ ಸಮಯದ ನಂತರ ಆರೋಪಿರ ಹತ್ತಿರ ಹೋಗಿ ಸ್ವಲ್ಪ ದೂರದಲ್ಲಿ ನಿಂತು ಗಮನಿಸಿ ಬಂದ ಬಾತ್ಮಿಯನ್ನು ಖಚಿತಪಡಿಸಿಕೊಂಡು ಚಾಸಾ 8 ರವರು ಕೈಯನ್ನು ಮೇಲಕ್ಕೆ ಎತ್ತಿ ಸನ್ನೆ ಮಾಡಿದ್ದು ನಂತರ ನಾವು ರಾತ್ರಿ 07.50 ಗಂಟೆಗೆ ಸದರಿ ಸ್ಥಳಕ್ಕೆ ದಾಳಿ ಮಾಡಿ 6 ಜನರನ್ನು ಹಿಡಿದು ಅವರ ಹೆಸರು ಕೇಳಿದಾಗ ತಮ್ಮ ಹೆಸರು ಭೀಮು, ರಾಕೇಶ, ಪ್ರವೀಣ್, ಪೃಥ್ವಿ, ಲಕ್ಷ್ಮಣ ಮತ್ತು ಸೂರ್ಯ ಎಂದು ತಿಳಿಸಿದ್ದು ಅವರ ಪೈಕಿ ನಾನು ಭೀಮು ಎಂಬುವವರನ್ನು ಹಿಡಿದುಕೊಂಡಿರುತ್ತೇನೆ.

ನಂತರ ಪಂಚರ ಸಮಕ್ಷಮ ಸದರಿ ವ್ಯಕ್ತಿಗಳ ಅಂಗಶೋಧನೆ ಮಾಡಿದಾಗ ಭೀಮು ಎಂಬುವವರ ಬೆನ್ನಿನ ಹಿಂಭಾಗದಲ್ಲಿ ಸುಮಾರು ಒಂದು ಅಡಿ ಉದ್ದದ ಕಬ್ಬಿಣದ ಚಾಕು ಇತ್ತು. ರಾಕೇಶ ಎಂಬುವವನ ಅಂಗಶೋಧನೆ ಮಾಡಿದಾಗ ಆತನ ಕೈಯಲ್ಲಿ ಒಂದು ಮರದ ದೊಣ್ಣೆ ಮತ್ತು ಆತನ ಪ್ಯಾಂಟ್ ಜೇಬಿನಲ್ಲಿ ಒಂದು ಹೊಡೆದು ಹೋಗಿರುವ ಐ ಫೋನ್ ಇತ್ತು. ನಂತರ ಪ್ರವೀಣ ಎಂಬಾತನ ಅಂಗಶೋಧನೆ ಮಾಡಿದಾಗ ಆತನ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಒಂದು ಕಾರದ ಪುಡಿ ಪ್ಯಾಕೇಟ್ ಮತ್ತು ಒಂದು ಸ್ಯಾಮಸಂಗ್ ಎ 9 ಫೋನ್ ಇತ್ತು. ನಂತರ ಪೃಥ್ವಿ ಇತನ ಅಂಗಶೋಧನೆ ಮಾಡಿದಾಗ ಆತನ ಕೈಯಲ್ಲಿ 2 ಅಡಿ ಉದ್ದದ ದೊಣ್ಣೆ ಇತ್ತು. ನಂತರ ಲಕ್ಷ್ಮಣ ಎಂಬಾತನ ಅಂಗಶೋಧನೆ ಮಾಡಿದಾಗ ಆತನ ಕೈಯಲ್ಲಿ ಒಂದುವರೆ ಉದ್ದದ ಕಬ್ಬಿಣದ ರಾಡ್ ಇತ್ತು. ನಂತರ ಸೂರ್ಯ ಎಂಬಾತನ ಅಂಗಶೋಧನೆ ಮಾಡಿದಾಗ ಆತನ ಬಳಿ ಯಾವುದೇ ಆಯುಧಗಳು ಇರಲಿಲ್ಲ.

ನಂತರ ಆರೋಪಿತರುಗಳನ್ನು ಸ್ಥಳಕ್ಕೆ ಬರಲು ಉಪಯೋಗಿಸಿದ ವಾಹನವನ್ನು ಪರಿಶೀಲಿಸಿದಾಗ ಅದು ಹೊಂಡಾ ಆ್ಯಕ್ಟಿವಾ ಕೆಎ 04 ಜೆಜಿ 0923 ಆಗಿತ್ತು. ಸದರಿ ವಾಹನವು ಪ್ರವೀಣ ಇತನ ಚಿಕ್ಕಮ್ಮಳಾದ ಗಾಯತ್ರಿ ಎಂಬುವವರ ಹೆಸರಿನಲ್ಲಿದ್ದು ತಾನು ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಥಳದಲ್ಲಿ ಮುದ್ದೆ ಮಾಲುಗಳನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ಒಂದು ಪಂಚಾನಾಮೆಯನ್ನು ಮಾಡಿ ಅದಕ್ಕೆ ಆರೋಪಿತರುಗಳು ಮತ್ತು ಸಿಬ್ಬಂದಿಗಳು ಸಹಿ ಮಾಡಿರುತ್ತೇವೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 2 ದೊನ್ನೆ, 1 ರಾಡ್, 1

ಚಾಕು ಮತ್ತು ಕಾರದ ಪುಡಿಯ ಪ್ಯಾಕೇಟ್ ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು. ಮಾ 1 ರಿಂದ 5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಉಳಿದ ಮುದ್ದೆ ಮಾಲುಗಳ ಭಾವಚಿತ್ರಗಳನ್ನು ಹಾಜರುಪಡಿಸದೇ ಇರುವುದರಿಂದ ಮತ್ತು ಪಂಚನಾಮೆಯ ಸಹಿಗಳು ಸರಿಯಾಗಿ ಕಾಣಿಸದೇ ಇರುವುದರಿಂದ ಭಾವಚಿತ್ರವನ್ನು ಮತ್ತು ಪಂಚನಾಮೆಯನ್ನು ಹಾಜರುಪಡಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

39 ನೇ ಅ. ಮು. ಮ. ದಂ. ನ್ಯಾ